SEVA BHARATHI
सेवा ही परमो धर्मः

ಸಂಚಿಕೆ : 07
ಸಂಪುಟ : 05

# ಸೇವಾಪಥ

ಸೇವಾಭಾರತಿ(ರಿ.), ಬೆಳ್ತಂಗಡಿ ತಾ॥ ಇದರ
(ರಾಜ್ಯ ಪ್ರಶಸ್ತಿ ಪುರಸ್ಕೃತ ಸೇವಾ ಸಂಸ್ಥೆ-2022)
ಮಾಸಿಕ e–ನ್ಯೂಸ್ ಲೆಟರ್ – ಜುಲೈ 2024

ಪ್ರಧಾನ ಕಚೇರಿ : ಸೇವಾನಿಕೇತನ, ಕನ್ಯಾಡಿ–॥, ಧರ್ಮಸ್ಥಳ ಅಂಚೆ, ಬೆಳ್ತಂಗಡಿ ತಾಲೂಕು, ದ.ಕ. – 574 216




## ಸೇವಾಧಾಮದಲ್ಲಿ ಸಂಸ್ಥಾಪಕರ ಹುಟ್ಟುಹಬ್ಬ ಆಚರಣೆ:
## ಪ್ಲಾಸ್ಟಿಕ್ ಮುಕ್ತ ಸೌತಡ್ಕಕ್ಕೆ ಸಂಕಲ್ಪ

## ಸಂಪನ್ನಗೊಂಡ 27ನೇ ಮಹಿಳೆಯರಿಗಾಗಿನ ಉಚಿತ ಟೈಲರಿಂಗ್ ತರಬೇತಿ ಶಿಬಿರ

## ಉಜಿರೆಯ ಕಿರಣ್ ಆಗ್ರೋಟೆಕ್‌ನಿಂದ ಸೇವಾಭಾರತಿಗೆ ಸೂಪರ್ ಗೋಲ್ಡ್ ಸ್ಪ್ರೇಯರ್(ಫಾಗ್) ಯಂತ್ರದ ಕೊಡುಗೆ

## ವಿಪತ್ತು ನಿರ್ವಹಣೆ ಬಗ್ಗೆ ಸಂಸ್ಥೆಯ ತಂಡಕ್ಕೆ ಬೆಂಗಳೂರಿನಲ್ಲಿ ಕಾರ್ಯಾಗಾರ

## ಬೆನ್ನುಹುರಿ ಅಪಘಾತಗೊಂಡರೂ ಉಲ್ಲನ್ ಹೆಣಿಕೆಯ ಮೂಲಕ ಬದುಕು ಕಟ್ಟಿಕೊಂಡ ಪೂರ್ಣಿಮಾ ಭಟ್ ಕುಂತೂರು

ಯಶೋಗಾಥೆ

## ನಮ್ಮಿಂದಿಷ್ಟು

ಎಲ್ಲರಿಗೂ ನಮಸ್ಕಾರಗಳು,

ಸ್ವಲ್ಪಸ್ವಲ್ಪ ಬದಲಾವಣೆ. ಅದು ನಮ್ಮ ಕಾರ್ಯ ವಿಧಾನದಲ್ಲಿ. ಪರಿಣಾಮ ಇನ್ನಷ್ಟು ಉತ್ತಮ ಸೇವೆ ಈ ಸಮಾಜಕ್ಕೆ ಸಿಗಬೇಕು, ಫಲಾನುಭವಿಗಳಿಗೆ ಅದರಲ್ಲೂ ಎಂಬುದು. ಸಿಬ್ಬಂದಿಗಳಿಗೂ ಜ್ಞಾನ ತುಂಬಬೇಕು ಎಂಬುದು ನಮ್ಮ ಇಚ್ಛೆ. ಆದ ಕಾರಣ ಈ ತಿಂಗಳ ಸಿಬ್ಬಂದಿಗಳ ಸಭೆಗೆ ಸುದ್ದಿ ಬಿಡುಗಡೆಯ ಚಾನೆಲ್ ಹೆಡ್ ದಾಮೋದರ ದೊಂಡೋಲೆ ಯವರನ್ನು ಸಂಪನ್ಮೂಲ ವ್ಯಕ್ತಿಯಾಗಿ ಆಮಂತ್ರಿಸಲಾಯಿತು. ಅವರು ಸಾಮಾಜಿಕ ಜಾಲತಾಣ ಮತ್ತು ಡಿಜಿಟಲ್ ರೂಪಾಂತರ ಬಗ್ಗೆ ಮಾಹಿತಿಯನ್ನು ಪ್ರಸ್ತುತಪಡಿಸಿದರು.

ಒಂದು ದೊಡ್ಡ ಆಂದೋಲನಕ್ಕಾಗಿ ತಯಾರಿ ಮಾಡುತ್ತಿದ್ದೇವೆ. ಬೆನ್ನುಹುರಿ ಅಪಘಾತಗೊಂಡವರ ಪಾಲಕರಿಗೆ ಮಾಸಾಶನ ನೀಡಬೇಕು ಮತ್ತು ಈಗಾಗಲೇ ಆದೇಶವಿರುವ ಬೆನ್ನುಹುರಿ ಅಪಘಾತಗೊಂಡವರಿಗೆ ಪ್ರತಿ PHC, CHC, ಸರಕಾರಿ ಆಸ್ಪತ್ರೆ, ಜಿಲ್ಲಾಸ್ಪತ್ರೆಗಳಲ್ಲಿ ಸೆಲ್ಫ್‌ಕೇರ್ ಕಿಟ್ ಮತ್ತು ಮೆಡಿಕಲ್ ಕಿಟ್‌ಗಳನ್ನು ನೀಡಬೇಕು ಎನ್ನುವುದು. ಇದರ ಅನುಷ್ಠಾನ ಮಾಡಬೇಕೆಂಬ ಎರಡು ಬೇಡಿಕೆಗಳಿಗೆ ಶತಪ್ರಯತ್ನ ಮಾಡುತ್ತಿದ್ದೇವೆ.

ಶಾಸಕರುಗಳ ಮೂಲಕ ಇಲಾಖೆಗೆ ಒತ್ತಾಯ ಪಡಿಸುವ ನಿಟ್ಟಿನಲ್ಲಿ ಪುತ್ತೂರು ಮತ್ತು ಬೈಂದೂರು ಶಾಸಕರು ಗಳನ್ನು ಭೇಟಿಮಾಡಿ ಪ್ರಸ್ತಾಪಿಸಿದ್ದೇವೆ. ಅಂಗವಿಕಲರ ಕಲ್ಯಾಣ ಇಲಾಖೆ ಸಚಿವರನ್ನು ಭೇಟಿಮಾಡಿ ರಾಜ್ಯಮಟ್ಟದ ರಿಹ್ಯಾಬ್ ಮೇಳಕ್ಕೆ ಸಮಯ ನಿರ್ಧರಿಸಲು ಮನವಿ ಮಾಡಿದ್ದೇವೆ. ರಾಜ್ಯ ವಿಕಲಚೇತನ ಅಧಿನಿಯಮದ ಆಯುಕ್ತರು, ಜಾಯಿಂಟ್ ಡೈರೆಕ್ಟರ್ ಹಾಗೂ ಡೈರೆಕ್ಟರ್‌ಗಳಿಗೆ ಮನವಿ ಸಲ್ಲಿಸಲಾಗಿದೆ.

ಅನೇಕ ಮಂದಿ ಫಲಾನುಭವಿಗಳು ರೆಟ್ರೋಫಿಟೆಡ್ ಸ್ಕೂಟರ್‌ಗಳನ್ನು ಪಡೆಯುವಲ್ಲಿ ಸಫಲರಾಗಿದ್ದಾರೆ. ರೆಟ್ರೋ ಫಿಟೆಡ್ ಸ್ಕೂಟರ್‌ಗಳ ಬದಲಾಗಿ ಹಲವರಿಗೆ ನೀಯೋ ಮೋಷನ್ ಕಂಪನಿಯ ನಿಯೋಬೋಲ್ಟ್ ಅವಶ್ಯಕವಿದೆ. ಇದು ಬ್ಯಾಟರಿ ಚಾಲಿತದ್ದೇ. ಆದರೆ ಸರ್ಕಾರದಿಂದ ಒಪ್ಪಿಗೆ ಸಿಗಬೇಕಷ್ಟೆ. ಶಾಸಕರು ಮನಸ್ಸು ಮಾಡಿ ಕ್ಷೇತ್ರಾಭಿವೃದ್ಧಿ ನಿಧಿಯೋಜನೆ ಯಡಿಯಲ್ಲಿ ನೀಡುವಂತೆ ಆಗಬೇಕಿದೆ.

ಡೆಂಗ್ಯೂ ಮಹಾಮಾರಿಯಿಂದಾಗಿ ಸೇವಾಧಾಮದ ಸನಿವಾಸಿಗಳಿಗಾಗಿ ಸೊಳ್ಳೆ ನಿಯಂತ್ರಣಕ್ಕಾಗಿ ಉಜಿರೆಯ ಕಿರಣ್ ಆಗ್ರೋಟೆಕ್‌ನ ಮಾಲೀಕರಾದ ಪ್ರಕಾಶ್ ಬಿ.ಕೆ.ಯವರು ಒಂದು ಸ್ಪ್ರೇಯರ್ (ಫಾಗ್) ಯಂತ್ರವನ್ನು ಕೊಡುಗೆ ನೀಡಿರುವುದು ಸಕಾಲದಲ್ಲಿ ದೊರೆತ ಸಹಾಯವಾಗಿದೆ. ಸಾಮಾಜಿಕ ಸ್ಪಂದಿಸು ವಂತಹ ಶ್ರೀಯುತರು ಮೊದಲಿನಿಂದಲೂ ಸೇವಾಭಾರತಿಯ ಆಧಾರಸ್ತಂಭ ವಾಗಿರುತ್ತಾರೆ.

ಬೆಂಗಳೂರಿನ ಎನೇಬಲ್ ಇಂಡಿಯಾ ಕೌಶಲ್ಯ ತರಬೇತಿಗಾಗಿ ಭೇಟಿ ನೀಡಿರುತ್ತೇವೆ ಹಾಗೂ ಸ್ವಉದ್ಯೋಗಕ್ಕೆ ನೆರವಾಗಬೇಕೆಂಬ ನಿಟ್ಟಿನಲ್ಲಿ ಪ್ರಯತ್ನವಿದೆ.

*ಸೇವಾ ಹೀ ಪರಮೋ ಧರ್ಮಃ*

ಇತೀ ತಮ್ಮವ, **ಕೆ. ವಿನಾಯಕ ರಾವ್**

## ನಮ್ಮ ವಿಳಾಸ


**ಪ್ರಧಾನ ಕಚೇರಿ :**

ಸೇವಾನಿಕೇತನ, ಕನ್ಯಾಡಿ–II
ಧರ್ಮಸ್ಥಳ ಗ್ರಾಮ, ಬೆಳ್ತಂಗಡಿ ತಾಲೂಕು – 574 216
ಮೊ.: 99454 91241

**ಸೇವಾ ಕೇಂದ್ರ :**

ಸೇವಾಧಾಮ
(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ)
ಸೌತಡ್ಕ ಶ್ರೀ ಮಹಾಗಣಪತಿ ದೇವಸ್ಥಾನದ ಬಳಿ
ಕೊಕ್ಕಡ ಗ್ರಾಮ – 574 198
ಮೊ.: 94482 54888



## ನಮ್ಮ ತಂಡ

ಶ್ರೀಮತಿ ಸ್ವರ್ಣಗೌರಿ – ಅಧ್ಯಕ್ಷರು
ಶ್ರೀ ಕೆ. ಯು. ಗಿರೀಶ್ ರಾವ್ – ಉಪಾಧ್ಯಕ್ಷರು
ಶ್ರೀ ಕೆ. ಬಾಲಕೃಷ್ಣ – ಕಾರ್ಯದರ್ಶಿ
ಶ್ರೀ ಕೆ. ವಿನಾಯಕ ರಾವ್ – ಖಜಾಂಚಿ
ಶ್ರೀ ಬಿ. ಕೃಷ್ಣಪ್ಪ ಗುಡಿಗಾರ್ – ಟ್ರಸ್ಟಿ
ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ – ಟ್ರಸ್ಟಿ

## ಸಲಹಾ ಮಂಡಳಿ

1. ಶ್ರೀ CA ಗುಜ್ಜಾಡಿ ಪ್ರಭಾಕರ ನರಸಿಂಹ ನಾಯಕ್
2. ಡಾ. ಎ. ಜಯಕುಮಾರ್ ಶೆಟ್ಟಿ
3. ಶ್ರೀಮತಿ ಮನೋರಮ ಭಟ್
4. ಶ್ರೀ ಉದಯಶಂಕರ್
5. ಶ್ರೀ ವಿಜಯ ಕೊಡವೂರು
6. ಶ್ರೀಮತಿ ಜೊಯ್ಸ್ ಫಿರೇರಾ
7. ಶ್ರೀ ನಾಗೇಂದ್ರ ಮಾಗಡಿ
8. ಶ್ರೀ ರಜತ್‌ರಾವ್, ಧರ್ಮಸ್ಥಳ
9. ಶ್ರೀ ಗಣೇಶ್ ಶೆಂಡ್ಯೆ
10. ಡಾ. ಮುರಳೀಧರ ನಾಯಕ್

## ಸಂಚಾಲಕರು

ಶ್ರೀ ಕೆ. ಪುರಂದರ ರಾವ್

# ಸೇವಾಧಾಮದಲ್ಲಿ ಸಂಸ್ಥಾಪಕರ ಹುಟ್ಟುಹಬ್ಬ ಆಚರಣೆ:
## ಪ್ಲಾಸ್ಟಿಕ್ ಮುಕ್ತ ಸೌತಡ್ಕಕ್ಕೆ ಸಂಕಲ್ಪ






ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್‌ರವರು ಈ ಬಾರಿಯೂ ಹುಟ್ಟುಹಬ್ಬವನ್ನು ಮಾದರಿ ರೂಪದಲ್ಲಿ ಆಚರಿಸಿದರು. ನೈಮಿಷ ಹೌಸ್ ಆಫ್ ಸ್ಪೈಸಸ್ ಸೌತಡ್ಕ, ಸೇವಾಧಾಮ ಸೌತಡ್ಕ, ಮಹಾಗಣಪತಿ ಸೇವಾಟ್ರಸ್ಟ್ (ರಿ) ಸೌತಡ್ಕ ಇವರ ನೇತೃತ್ವದಲ್ಲಿ ಪ್ಲಾಸ್ಟಿಕ್ ಮುಕ್ತ ಸೌತಡ್ಕದ ಸಂಕಲ್ಪ ತೊಟ್ಟಿರುತ್ತಾರೆ. ಇದರ ಸಲುವಾಗಿ ಬಾಲಕೃಷ್ಣ ನೈಮಿಷ ಅವರು ಸೌತಡ್ಕದ ಪ್ರತಿ ಅಂಗಡಿಗಳಲ್ಲಿ ಕಸದ ಡಬ್ಬಿಯನ್ನು ಇಟ್ಟು ಪ್ಲಾಸ್ಟಿಕ್‌ಮುಕ್ತ ಮಾಡುವ ಪ್ರಯತ್ನ ಮಾಡುತ್ತೇವೆ ಎಂಬ ಭರವಸೆ ಮತ್ತು ಸೌತಡ್ಕಕ್ಕೆ ಆಗಮಿಸುವ ಎಲ್ಲಾ ಭಕ್ತಾದಿಗಳಲ್ಲಿ, ನಿವಾಸಿಗಳಲ್ಲಿ ಮತ್ತು ಅಂಗಡಿ ಮಾಲಿಕರಲ್ಲಿ ಸ್ವಚ್ಛಸೌತಡ್ಕವನ್ನಾಗಿ ಮಾಡಲು ಮನವಿ ಮಾಡಿದ್ದಾರೆ. ಸೇವಾಧಾಮದ ಮುಂಭಾಗದಲ್ಲಿ ಸೇವಾಭಾರತಿಯ ಸಿಬ್ಬಂದಿವರ್ಗದವರು, ಸೌತಡ್ಕ ಮಹಾಗಣಪತಿ ಸೇವಾಟ್ರಸ್ಟ್(ರಿ) ಹಾಗೂ ನೈಮಿಷ ಹೌಸ್ ಆಫ್ ಸ್ಪೈಸಸ್‌ರವರ ಸಹಕಾರದೊಂದಿಗೆ "ಸ್ವಚ್ಛಸೌತಡ್ಕ" ಶೀರ್ಷಿಕೆಯಡಿಯಲ್ಲಿ ಸ್ವಚ್ಛತಾ ಕಾರ್ಯಕ್ರಮವನ್ನು ನಡೆಸಲಾಯಿತು.

ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್‌ರವರ ಹುಟ್ಟುಹಬ್ಬವನ್ನು 29/7/2024 ರಂದು ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ಆಚರಿಸಲಾಯಿತು.

ಮಹಾಗಣಪತಿ ಸೇವಾಟ್ರಸ್ಟಿನ ಅಧ್ಯಕ್ಷರಾದ ಶ್ರೀ ಕೆ. ಕೃಷ್ಣ ಭಟ್ ಇನ್ನಷ್ಟು ಸೇವಾಕಾರ್ಯ ಮಾಡುವ ಧೈರ್ಯ ಹಾಗೂ ದೇವರು ಆರೋಗ್ಯವನ್ನು ಕರುಣಿಸಲಿ ಎಂದು ಶ್ರೀ ಕೆ. ವಿನಾಯಕ ರಾವ್‌ರವರ ಹುಟ್ಟುಹಬ್ಬಕ್ಕೆ ಶುಭಹಾರೈಸಿದರು.

ತಮ್ಮ ಹುಟ್ಟುಹಬ್ಬದ ಸಂದರ್ಭದಲ್ಲಿ ತನ್ನ ಬದುಕಿನ ಏಳಿಗೆಗಾಗಿ ಮಾರ್ಗದರ್ಶನ ಸಹಕಾರ ನೀಡಿದವರನ್ನು ಸ್ಮರಿಸುತ್ತ, ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಸರಕಾರದಿಂದ ಸಿಗಬೇಕಾದ ಸೌಲಭ್ಯದಿಂದ ವಂಚಿತರಾಗುವುದರ ಬಗ್ಗೆ ವಿಷಾದವನ್ನು ವ್ಯಕ್ತಪಡಿಸಿದರು. ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಸರಕಾರ ಗಮನಾರ್ಹ ಚಿಂತನೆ ಮಾಡಬೇಕಾದ ಅನಿವಾರ್ಯತೆ ಇದೆ ಎಂದು ಈ ಸಂದರ್ಭದಲ್ಲಿ ತಿಳಿಸಿದರು.

ಸನಿವಾಸಿಗಳಿಗೆ, ಫಲಾನುಭವಿಗಳಿಗೆ, ಆರೈಕೆದಾರರಿಗೆ ಹಾಗೂ ಸಿಬ್ಬಂದಿವರ್ಗದವರಿಗೆ ವಿಭಿನ್ನ ಚಟುವಟಿಕೆಗಳ ಜೊತೆಗೆ ಶ್ರೀ ಕೆ. ವಿನಾಯಕ ರಾವ್‌ರವರ ಬಗ್ಗೆ ತಮ್ಮ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಸೇವಾಧಾಮದಿಂದ ಪುನಶ್ಚೇತನಗೊಂಡ ದಿವ್ಯಾಂಗರು ತಮ್ಮ ಕೈಯಾರೆ ಸ್ವ- ಉದ್ಯೋಗದಲ್ಲಿ ಮಾಡಿದಂತಹ ಕರಕುಶಲತೆಯನ್ನು ಉಡುಗೊರೆಯಾಗಿ ನೀಡಲಾಯಿತು.

ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘ ನಿಯಮಿತ ಕೊಕ್ಕಡ ಇದರ ಅಧ್ಯಕ್ಷರಾದ ಶ್ರೀ ಕುಶಲಪ್ಪ ಗೌಡ, ಶ್ರೀರಾಮ ವಿದ್ಯಾಸಂಸ್ಥೆ ಪಟ್ಟೂರಿನ ಸಂಚಾಲಕರಾದ ಶ್ರೀ ಪ್ರಶಾಂತ್ ಶೆಟ್ಟಿ ದೇರಾಜೆ ಹಾಗೂ ಸೇವಾಭಾರತಿ ಕಾರ್ಯದರ್ಶಿ ಶ್ರೀ ಬಾಲಕೃಷ್ಣ ಹಾಗೂ ಸಂಸ್ಥೆಯ ದಾನಿಗಳು, ಹಿತೈಷಿಗಳು, ಸನಿವಾಸಿಗಳು, ಆರೈಕೆದಾರರು ಹಾಗೂ ಸಿಬ್ಬಂದಿವರ್ಗದವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಸೇವಾಭಾರತಿಯ ಹಿರಿಯ ಪ್ರಬಂಧಕರಾದ ಚರಣ್ ನಿರೂಪಣೆ ಮಾಡಿ ಅನುಸರಣೆ ಮತ್ತು ಹಣಕಾಸು ವ್ಯವಸ್ಥಾಪಕ ಮೋಹನ್ ಸ್ವಾಗತಿಸಿ, ದಕ್ಷಿಣಕನ್ನಡ ಮತ್ತು ಕೊಡಗು ಜಿಲ್ಲೆಯ ಕ್ಷೇತ್ರ ಸಂಯೋಜಕರಾದ ಕುಸುಮಾಧರ್ ಧನ್ಯವಾದವಿತ್ತರು.

# ಸಂಪನ್ನಗೊಂಡ 27ನೇ ಮಹಿಳೆಯರಿಗಾಗಿನ ಉಚಿತ ಟೈಲರಿಂಗ್ ತರಬೇತಿ ಶಿಬಿರ






ಸೇವಾಭಾರತಿ (ರಿ.), ಕನ್ಯಾಡಿ ಇದರ ಆಶ್ರಯದಲ್ಲಿ ಶ್ರೀ ದುರ್ಗಾ ಮಾತೃಮಂಡಳಿ ಕನ್ಯಾಡಿ ಮತ್ತು ಬೆಳ್ತಂಗಡಿ ತಾಲೂಕು ಮಹಿಳಾ ಸಹಕಾರ ಸಂಘ (ನಿ), ಉಜಿರೆ ಇವುಗಳ ಸಹಯೋಗದಲ್ಲಿ ಮಹಿಳೆಯರಿಗಾಗಿ ಆಯೋಜಿಸಿದ್ದ 1 ತಿಂಗಳ ಉಚಿತ ಟೈಲರಿಂಗ್ ತರಬೇತಿ ಶಿಬಿರದ ಸಮಾರೋಪ ಸಮಾರಂಭವು ಜುಲೈ 22 ರಂದು ಧರ್ಮಸ್ಥಳದ ನಾರ್ಯದ ಮಂಜುಶ್ರೀ ಅಗ್ರಹಾರದ ಬಳಿ ಇರುವ ಬನದಡ್ಡ ಜಿಮ್‌ನ ಕಟ್ಟಡದಲ್ಲಿ ನಡೆಯಿತು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ನಾರ್ಯದ ಸ್ಥಳೀಯರಾದ ಶ್ರೀಮತಿ ವಿಜಯಲಕ್ಷ್ಮಿ ಇವರು ಮಹಿಳಾ ಸಬಲೀಕರಣದ ಮಹತ್ವ ತಿಳಿಸಿ ತರಬೇತು ಪಡೆಯಲು ಬಂದಂತಹ ಶಿಬಿರಾರ್ಥಿಗಳಿಗೆ ಶುಭಹಾರೈಸಿದರು.

ಕಾರ್ಯಕ್ರಮದಲ್ಲಿ ಶ್ರೀ ದುರ್ಗಾ ಮಾತೃಮಂಡಳಿಯ ಅಧ್ಯಕ್ಷರಾದ ಶಾಂತಾ ಪಿ.ಶೆಟ್ಟಿ ಮಹಿಳೆಯರಿಗೆ ಶಿಕ್ಷಣದ ಅಗತ್ಯತೆಯ ಜೊತೆಗೆ ಮಹಿಳೆಯರು ಸ್ವ–ಉದ್ಯೋಗ ತರಬೇತಿ ಪಡೆದು, ಸ್ವಾವಲಂಬಿಯಾಗಿ ಜೀವನ ನಡೆಸಿದಾಗ, ಮಹಿಳಾ ಸಬಲೀಕರಣಕ್ಕೆ ನಿಜವಾದ ಅರ್ಥ ನೀಡಿದಂತಾಗುತ್ತದೆ ಎಂದು ಅಧ್ಯಕ್ಷೀಯ ನುಡಿಗಳನ್ನಾಡಿದರು.

ಕಾರ್ಯಕ್ರಮದಲ್ಲಿ ಟೈಲರಿಂಗ್ ತರಬೇತುದಾರರಾದ ರಶ್ಮಿ ಇವರು ತರಬೇತಿಯಲ್ಲಿ ತಿಳಿಸಿಕೊಟ್ಟ ಹೊಲಿಗೆಯ ವಿಧಗಳ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸಿ, ಶಿಬಿರಾರ್ಥಿಗಳು ಒಂದು ತಿಂಗಳ ಅವಧಿಯಲ್ಲಿ ರವಿಕೆ ಮತ್ತು ಚೂಡಿದಾರಗಳನ್ನು ಹೊಲಿಯಲು ಕಲಿತಿರುತ್ತಾರೆ ಎಂದು ಸಂತಸ ವ್ಯಕ್ತಪಡಿಸಿದರು. ಅವರನ್ನು ಸೇವಾಭಾರತಿ ಹಾಗೂ ಶ್ರೀ ದುರ್ಗಾ ಮಾತೃಮಂಡಳಿ ಪರವಾಗಿ ಗೌರವಿಸಲಾಯಿತು. ನಂತರ ಕಾರ್ಯಕ್ರಮದಲ್ಲಿ ಶಿಬಿರಾರ್ಥಿಗಳಿಗೆ ಪ್ರಮಾಣಪತ್ರ ವಿತರಿಸಲಾಯಿತು. ಶ್ರೀ ದುರ್ಗಾ ಮಾತೃ ಮಂಡಳಿಯ ಸದಸ್ಯರಾದ ಸವಿತಾ ಎಂ. ರಾವ್ ಉಪಸ್ಥಿತರಿದ್ದರು.



ಕಾರ್ಯಕ್ರಮದಲ್ಲಿ ಒಟ್ಟು 21 ಮಂದಿ ಶಿಬಿರಾರ್ಥಿಗಳು ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಸೇವಾಭಾರತಿ ಡಾಕ್ಯುಮೆಂಟೇಶನ್ , ಮಾನಿಟರಿಂಗ್ ಮತ್ತು ಇವಲ್ಯೂಟಿಂಗ್ ಸಂಯೋಜಕರಾದ ಸುಮ ನಿರೂಪಿಸಿ, ಅಕೌಂಟೆಂಟ್ ಕು। ಅಕ್ಷತಾ ಸ್ವಾಗತಿಸಿ, ಧನ್ಯವಾದವಿತ್ತರು.

## ವಿಪತ್ತು ನಿರ್ವಹಣೆ ಬಗ್ಗೆ ಸಂಸ್ಥೆಯ ತಂಡಕ್ಕೆ ಬೆಂಗಳೂರಿನಲ್ಲಿ ಕಾರ್ಯಾಗಾರ

ಬೆಂಗಳೂರು, ರಾಷ್ಟ್ರೀಯ ಸೇವಾಭಾರತಿ ಇವರು ಜುಲೈ 14 ರಂದು ಆಯೋಜಿಸಿದ ರಾಷ್ಟ್ರೀಯ ವಿಪತ್ತು ನಿರ್ವಹಣಾ ಕಾರ್ಯಾಗಾರದಲ್ಲಿ ಸೇವಾ ಭಾರತೀಯ ಟ್ರಸ್ಟಿ ವಿಷ್ಣು ಪ್ರಸಾದ್ ತೆಂಕಿಲ್ಲಾಯ ಹಾಗೂ ಹಿರಿಯ ಪ್ರಬಂಧಕರಾದ ಚರಣ್ ಇವರು ಭಾಗವಹಿಸಿದ್ದರು. ವಿಪತ್ತು ನಿರ್ವಹಣಾ ಕಾರ್ಯಾಗಾರದಲ್ಲಿ ತುರ್ತು ನಿರ್ವಹಣೆ, ಹಾವು ಕಚ್ಚಿದಾಗ ರಕ್ಷಣೆ ಮಾಡುವುದು ಮತ್ತು ಪ್ರಥಮ ಚಿಕಿತ್ಸೆ ಇವೆಲ್ಲದರ ಬಗ್ಗೆ ಕಾರ್ಯಾಗಾರದಲ್ಲಿ ಮಾಹಿತಿ ನೀಡಲಾಯಿತು. ಹಾಗೂ ಸೇವಾಭಾರತಿಯ ಕಾರ್ಯಚಟುವಟಿಕೆಗಳ ಬಗ್ಗೆಯೂ ಸಹ ವಿಡಿಯೋ ಮೂಲಕ ಎಲ್ಲರಿಗೂ ಮಾಹಿತಿಯನ್ನು ಪ್ರದರ್ಶಿಸಲಾಯಿತು.

## ದೇಣಿಗೆ ನೀಡಿದ ಸಂಘ ಸಂಸ್ಥೆಗಳು

ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್, ಪುತ್ತೂರು
ಪ್ರಶಮನಿ ಚಾರಿಟೇಬಲ್ ಟ್ರಸ್ಟ್, ಕೊಪ್ಪ
ಉಜಿರೆ ಹವ್ಯಕ ವಲಯ, ಉಜಿರೆ
ಶ್ರೀ ಪ್ರಕಾಶ್ ಬಿ. ಕೆ. ಕಿರಣ್ ಆಗ್ರೋಟೆಕ್, ಉಜಿರೆ
ಅಮೃತ ಶಿಶು ನಿವಾಸ, ಬೆಂಗಳೂರು
ಶ್ರೀ ಭಾಸ್ಕರ್ ವಿಜಯಶಾಸ್ತ್ರಿ , ಧರ್ಮಸ್ಥಳ

## ಮಹನೀಯ ದಾನಿಗಳು

ಶ್ರೀ ಎ. ಕಿರಣ್, ಹಾಸನ
ಕು. ಚಂದನ್ ಅಮಿತ್ ಚವಾನ್, ಮುಂಬೈ
ಶ್ರೀ ಮ್ಯಾಕ್ಸಿಮ್. ಎ
ಶ್ರೀ ಶಂಕರ್ ಗೌಡ ಎಂ ಪಾಟೀಲ ಬಾಗಲಕೋಟೆ
ಶ್ರೀ ಪ್ರವೀಣ್ ದೇವಾಡಿಗ, ಕುಂಜಿಬೆಟ್ಟು
ಶ್ರೀ ಕಾರ್ತಿಕ್ ಗೌಡ, ಸುಳ್ಯ
ಶ್ರೀ ಪನ್ನಗ ಶೆಟ್ಟಿ, ಬೈಂದೂರು
ಶ್ರೀ ಶ್ರೇಯಸ್ , ಹಾಸನ
ಶ್ರೀ ಹರಿಕಿರಣ್ ಮತ್ತು ಶ್ರೀಮತಿ ಅಪೂರ್ವ ಪಿ.ವಿ, ಬದಿಯಡ್ಕ
ಶ್ರೀ ಕೃಷ್ಣ ಮಂಜುನಾಥ ಪೂಜಾರಿ, ಶಿರಸಿ
ಕು। ಸುಜ್ಞ, ಶಿವಮೊಗ್ಗ
ಶ್ರೀ ಕೆ. ವಿವೇಕ್ ರಾವ್, ಬೆಂಗಳೂರು
ಶ್ರೀ ಜಯಪ್ರಕಾಶ್, ಬೆಳ್ಳಾರೆ
ಶ್ರೀ ಉದಯಶಂಕರ್, ಅರಸಿನಮಕ್ಕಿ
ಮಾಸ್ಟರ್ ಪ್ರನೀಲ್, ಕಡಬ
ಶ್ರೀ ಗುರುಪ್ರಸಾದ್ ಟಿ., ಬೆಳ್ತಂಗಡಿ
ಶ್ರೀ ರಾಮರಾವ್ ಎಂ, ಬೆಂಗಳೂರು
ಶ್ರೀ ದಿನೇಶ್ ಕೆ. ಹೆಗ್ಡೆ ಮತ್ತು ಶ್ರೀಮತಿ ಆಶಾ ದಿನೇಶ್ ಹೆಗ್ಡೆ
ಶ್ರೀಮತಿ ಮಮತಾ ಎನ್ ಹೊಳ್ಳ, ಉಜಿರೆ
ಶ್ರೀ ಉಮಾಕಾಂತ್ ಡಿ., ಬೆಂಗಳೂರು
ಬೇಬಿ ರಿಧನ್ಯ ಗುರುಪ್ರಸಾದ್. ಟಿ, ಬೆಳ್ತಂಗಡಿ
ಕು। ರಚನಾ ಗುಡಿಗಾರ್, ಅಲೆಕ್ಕಿ
ಶ್ರೀ ಹರ್ಗ ದಿನಾಕರ್ ಶೆಟ್ಟಿ, ಉಡುಪಿ
ಕು। ಪ್ರೀತಿ ವಿ.ಜೆ., ಕಿಲ್ಲೂರು
ಶ್ರೀ ಶಾಂತ ಕುಮಾರಿ, ಉಜಿರೆ
ಶ್ರೀ ಕಾರ್ತಿಕ್ ಗೌಡ, ಪೆರ್ಲಂಪಾಡಿ
ಮಾ। ರಿಷಾಗ್ ಗುರುಪ್ರಸಾದ್, ಬೆಳ್ತಂಗಡಿ
ಮಾ। ಆರ್ಯನ್ ಅಭಿಷೇಕ್, ಬೆಂಗಳೂರು
ಶ್ರೀಮತಿ ಮಂಜುಳ ಉತಪ್ಪ, ಬೆಂಗಳೂರು

## ಜುಲೈ ತಿಂಗಳ ಸೇವಾ ಕಾರ್ಯಗಳು

1. ಗಾಲಿಕುರ್ಚಿ ವಿತರಣೆ – 2
2. ನೀರಿನ ಹಾಸಿಗೆ – 1
3. ಸೆಲ್ಫ್‌ಕೇರ್ ಮತ್ತು ಮೆಡಿಕಲ್ ಕಿಟ್ – 31
4. ಗಾಳಿಯ ಹಾಸಿಗೆ – 2

## ಆಯುಕ್ತರಿಗೆ ಕಚೇರಿಯಲ್ಲಿ ಮನವಿಪತ್ರ ಸಲ್ಲಿಕೆ

ಬೆಂಗಳೂರು ಕರ್ನಾಟಕ ವಿಕಲಚೇತನ ವ್ಯಕ್ತಿಗಳ ಹಕ್ಕುಗಳ ಕಾಯ್ದೆ ಇದರ ರಾಜ್ಯ ಆಯುಕ್ತರ ಕಚೇರಿಯಲ್ಲಿ ಸೆಕ್ಷನ್ ಆಫೀಸರ್ ಆದಂತಹ ಶ್ರೀ ರವಿಶಂಕರ್‌ರವರನ್ನು ಭೇಟಿ ಮಾಡಿ ಬೆನ್ನುಹುರಿ ಅಪಘಾತಗೊಂಡ ದಿವ್ಯಾಂಗರಿಗೆ ಆರೈಕೆದಾರರ ಭತ್ಯೆ ಪ್ರತಿ ನೀಡುವುದರ ಕುರಿತು, ಎಲ್ಲಾ ಡಿಎಚ್‌ಒಗಳಿಗೆ ಬೆನ್ನುಹುರಿ ಅಪಘಾತಗೊಂಡ ದಿವ್ಯಾಂಗರಿಗೆ ಪಿಎಚ್‌ಸಿ ಮೂಲಕ ಸೆಲ್ಫ್‌ಕೇರ್ ಕಿಟ್ ಮತ್ತು ಮೆಡಿಕಲ್ ಕಿಟ್ ನೀಡುವಂತೆ ಸುತ್ತೋಲೆ ಹೊರಡಿಸಲು ಹಾಗೂ ಬೆನ್ನುಹುರಿ ಅಪಘಾತಗೊಂಡವರನ್ನು 22ನೇ ದಿವ್ಯಾಂಗತೆಯನ್ನಾಗಿ ಪರಿಗಣಿಸುವ ಸಲುವಾಗಿ ಮನವಿಪತ್ರ ನೀಡುವುದರ ಮೂಲಕ ಕೇಳಿಕೊಳ್ಳಲಾಯಿತು. ಪಿಎಚ್‌ಸಿಇಂದ ಎಲ್ಲಾ ರೀತಿಯ ಆರ್ಡರ್ ಕೊಡುವ ಹಾಗೆ ನಾವು ಡೈರೆಕ್ಟ್ ಹೆಲ್ತ್‌ಮಿನಿಸ್ಟರ್‌ಗೆ ಲೆಟರ್ ಮಾಡುತ್ತೇವೆ ಎಂಬ ಭರವಸೆಯನ್ನು ನೀಡಿದ್ದಾರೆ.

ಈ ಸಂದರ್ಭದಲ್ಲಿ ಸೇವಾಭಾರತಿಯ ಟ್ರಸ್ಟಿ ವಿಷ್ಣುಪ್ರಸಾದ್ ತೆಂಕಿಲ್ಲಾಯ, ಸೇವಾಭಾರತಿಯ ಹಿರಿಯ ಪ್ರಬಂಧಕರಾದ ಚರಣ್ ಹಾಗೂ ಮಾರ್ಕೆಟಿಂಗ್ ಮತ್ತು ಧನಸಂಗ್ರಹಣ ವ್ಯವಸ್ಥಾಪಕ ಆಶ್ರಿತ್ ಸಿ.ಪಿ. ಉಪಸ್ಥಿತರಿದ್ದರು.

## ಸೇವಾನಿಧಿ ದಾನಿಗಳು

ಕು। ಸಂತೃಪ್ತಿ ಆರ್ ಫಡ್ಕೆ
ವೆಲ್ವೆಟ್ ಟ್ರಾವೆಲ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು
ಶ್ರೀ ಕೆ. ಪುರಂದರ ರಾವ್, ನಾರ್ಯ
ಶ್ರೀಮತಿ ಜಯಂತಿ ಪುರಂದರ್, ನಾರ್ಯ
ಶ್ರೀ ರಾಜೇಶ್ ಫಡ್ಕೆ, ಬೆಂಗಳೂರು
ಶ್ರೀಮತಿ ಸ್ವರ್ಣಗೌರಿ, ಧರ್ಮಸ್ಥಳ
ಶ್ರೀ ಬಿ. ರಾಮದಾಸ್ ಭಂಡಾರ್ಕರ್, ಉಜಿರೆ
ಶ್ರೀ ಶ್ರೀಧರ್ ಕೆ.ವಿ, ಉಜಿರೆ
ಹೋಟೆಲ್ ಬಾಂಬೆಡೈನ್, ಉಜಿರೆ
ಶ್ರೀ ವಿನಾಯಕ ರಾವ್, ಕನ್ಯಾಡಿ
ಶ್ರೀ ಕಾರ್ತಿಕ್ ಕೆ, ಧರ್ಮಸ್ಥಳ
ಶ್ರೀ ಮಧುಸೂದನ್ ಎಂ. ಜಿ, ಉಜಿರೆ
ಶ್ರೀ ಬಿ. ಪುರಂದರ, ಧರ್ಮಸ್ಥಳ
ಶ್ರೀ ರಜತ್ ಕುಮಾರ್ ಜೆ. ಡಿ, ವೇಣೂರು
ಮಾ। ಅದ್ವೈತ್ ಪೈ, ಕನ್ಯಾಡಿ
ಶ್ರೀ ಡಿ. ಎನ್ ಗಿರೀಶ್, ಧರ್ಮಸ್ಥಳ
ಶ್ರೀ ಸೂರ್ಯನಾರಾಯಣ ರಾವ್, ಧರ್ಮಸ್ಥಳ
ಶ್ರೀ ಪುರುಷೋತ್ತಮ್ ಡಿ. ಎ, ಧರ್ಮಸ್ಥಳ
ಶ್ರೀ ಶಿವಕುಮಾರ್, ಉಜಿರೆ
ಶ್ರೀ ಸುನಿಲ್ ಕುಮಾರ್ ಜೈನ್, ಕನ್ಯಾಡಿ
ಡಾ। ರಾಮಕೃಷ್ಣ ಭಟ್, ಕನ್ಯಾಡಿ
ಶ್ರೀಮತಿ ಸವಿತಾ ಎಂ ರಾವ್, ಕನ್ಯಾಡಿ
ಶ್ರೀ ಜಯಾನಂದ ಎಂ, ಕನ್ಯಾಡಿ
ಶ್ರೀ ಸಂತೋಷ್ (ಸ್ವಸ್ತಿಕ್ ಸ್ಟೋರ್), ಕೊಕ್ಕಡ
ಶ್ರೀ ಸುಹಸ್ ಅಲೆಕ್ಕೇಡಿ
ಶ್ರೀ ಅಕ್ಷಯ್ ಪಾಟಾಲಿ
ಶ್ರೀ ಸುರೇಂದ್ರ ಕುಡುವ

# ಮಂಗಳೂರಿನಲ್ಲಿ ಸಚಿವೆ ಲಕ್ಷ್ಮೀ ಆರ್.ಹೆಬ್ಬಾಳ್ಕರ್ ಭೇಟಿ



ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ವಿಕಲಚೇತನ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಚಿವರಾದ ಹಾಗೂ ಉಡುಪಿ ಜಿಲ್ಲೆಯ ಉಸ್ತುವಾರಿ ಸಚಿವರಾದ ಶ್ರೀಮತಿ ಲಕ್ಷ್ಮೀ ಆರ್. ಹೆಬ್ಬಾಳ್ಕರ್ ರವರನ್ನು ಜುಲೈ 13 ರಂದು ಮಂಗಳೂರಿನಲ್ಲಿ ಮುಖತಃ ಭೇಟಿ ಮಾಡಲಾಯಿತು.

ಬೆನ್ನುಹುರಿ ಅಪಘಾತಗೊಂಡ ದಿವ್ಯಾಂಗರ ಆರೈಕೆದಾರರಿಗೆ ಮಾಶಾಸನ ನೀಡುವಂತೆ ಮನವಿ ಸಲ್ಲಿಸಲಾಯಿತು ಹಾಗೂ ಬೆನ್ನುಹುರಿ ಅಪಘಾತಕ್ಕೊಳಗಾದ ಮಹಿಳಾ ದಿವ್ಯಾಂಗರಿಗಾಗಿ ಉಡುಪಿಯಲ್ಲಿ ನಡೆಯುವ " 3 ದಿನಗಳ ರಾಜ್ಯಮಟ್ಟದ ರಿಹ್ಯಾಬ್ ಮೇಳ"ವನ್ನು ಉದ್ಘಾಟಿಸಿ ಬೆನ್ನುಹುರಿ ಅಪಘಾತಗೊಂಡ ಮಹಿಳಾ ದಿವ್ಯಾಂಗರನ್ನು ಹಾಗೂ ಅವರ ಆರೈಕೆದಾರರನ್ನು ಉದ್ಘಾಟಿಸಿ ಶುಭ ಹಾರೈಸಬೇಕೆಂದು ಸೇವಾಭಾರತಿ ಕನ್ಯಾಡಿಯ ಅನುಸರಣೆ ಮತ್ತು ಹಣಕಾಸು ವ್ಯವಸ್ಥಾಪಕ ಮೋಹನ್ ಹಾಗೂ ಧನಸಂಗ್ರಹಣ ವ್ಯವಸ್ಥಾಪಕ ಆಶ್ರಿತ್ ಸಿ.ಪಿ, ಶ್ರೀಮತಿ ಲಕ್ಷ್ಮೀ ಹೆಬ್ಬಾಳ್ಕರ್‌ವರನ್ನು ಭೇಟಿಮಾಡಿ ಮನವಿ ಪತ್ರ ನೀಡುವುದರ ಮೂಲಕ 3 ದಿನಗಳ ರಾಜ್ಯಮಟ್ಟದ ರಿಹ್ಯಾಬ್ ಮೇಳಕ್ಕೆ ಆಮಂತ್ರಿಸಲಾಯಿತು.

# ಅಮೃತ ಶಿಶು ನಿವಾಸಕ್ಕೆ ಮನವಿಪತ್ರ ಸಲ್ಲಿಕೆ

ಅಮೃತ ಶಿಶು ನಿವಾಸ ಬೆಂಗಳೂರು ಕಳೆದ ಬಾರಿಯೂ ತಮ್ಮ "ಸೇವಾಧಾಮ" ಬೆನ್ನುಹುರಿ ಅಪಘಾತಕ್ಕೊಳಗಾದವರ ಪುನಶ್ಚೇತನ ಕೇಂದ್ರಕ್ಕಾಗಿ ಅಕ್ಕಿ, ಕಾಳು, ಬೇಳೆ, ಎಣ್ಣೆ ಇತ್ಯಾದಿಗಳನ್ನು ನೀಡಿ ಸಹಕರಿಸಿದ್ದು. ಈ ಬಾರಿಯೂ ದಿನಸಿ ಸಾಮಗ್ರಿಗಳನ್ನು ಒದಗಿಸಿಕೊಡಬೇಕೆಂಬ ನಿಟ್ಟಿನಲ್ಲಿ ಜುಲೈ 15 ರಂದು ಬೆಂಗಳೂರಿನಲ್ಲಿ ಮನವಿ ಪತ್ರ ನೀಡುವುದರ ಮೂಲಕ ಕೇಳಿಕೊಳ್ಳಲಾಯಿತು.

ನಮ್ಮ ಮನವಿ ಪತ್ರಕ್ಕೆ ಒಗೊಟ್ಟು ಅಮೃತ ಶಿಶು ನಿವಾಸ ಬೆಂಗಳೂರು ಈ ಬಾರಿಯೂ ದೋಸೆ ಅಕ್ಕಿ, ಅವಲಕ್ಕಿ ಶ್ಯಾವಿಗೆ, ಗೋಧಿ ಹಿಟ್ಟು, ಅಕ್ಕಿ, ಉದ್ದಿನ ಬೇಳೆ, ರಾಗಿ, ಬಿಸ್ಕತ್ ಗಳನ್ನು ನೀಡಿ ಸಹಕರಿಸಿದ್ದಾರೆ. ಇವರಿಗೆ ತುಂಬುಹೃದಯದ ಧನ್ಯವಾದಗಳು.

ಈ ಸಂದರ್ಭದಲ್ಲಿ ಸೇವಾ ಭಾರತೀಯ ಟ್ರಸ್ಟಿ ವಿಷ್ಣು ಪ್ರಸಾದ ತೆಂಕಿಲ್ಲಾಯ, ಹಿರಿಯ ಪ್ರಬಂಧಕರಾದ ಚರಣ್ ಮತ್ತು ಧನ ಸಂಗ್ರಹಣ ವ್ಯವಸ್ಥಾಪಕರಾದ ಆಶ್ರಿತ್ ಸಿ.ಪಿ ಉಪಸ್ಥಿತರಿದ್ದರು.

# ದ.ಕ. ಜಿಲ್ಲೆಯ ಮಾನ್ಯ ಸಂಸದರಿಗೆ ಮನವಿಪತ್ರ ಸಲ್ಲಿಕೆ



ದಕ್ಷಿಣ ಕನ್ನಡ ಜಿಲ್ಲೆಯ ಲೋಕಸಭಾ ಸದಸ್ಯರಾಗಿರುವ ಕ್ಯಾಪ್ಟನ್ ಬ್ರಿಜೇಶ್ ಚೌಟ ಇವರನ್ನು ಜುಲೈ 13 ರಂದು ಮಂಗಳೂರಿನಲ್ಲಿ ಭೇಟಿ ಮಾಡಿ ಅಭಿನಂದಿಸಿ, ಬೆನ್ನುಹುರಿ ಅಪಘಾತಗೊಂಡ ದಿವ್ಯಾಂಗರ ಬಗ್ಗೆ ಕೇಂದ್ರ ಸರ್ಕಾರದ ಗಮನ ನೀಡುವಂತೆ ವಿನಂತಿಸಿ, ಸೇವಾಧಾಮ ಪುನಶ್ಚೇತನ ಕೇಂದ್ರಕ್ಕೆ ಅವರನ್ನು ಆಮಂತ್ರಿಸಿ ಮನವಿ ಪತ್ರ ನೀಡುವುದರ ಮೂಲಕ ಕೇಳಿಕೊಳ್ಳಲಾಯಿತು.

ಈ ಸಂದರ್ಭದಲ್ಲಿ ಸೇವಾಭಾರತಿ ಅಧ್ಯಕ್ಷರಾದ ಸ್ವರ್ಣಗೌರಿ, ಅನುಸರಣೆ& ಹಣಕಾಸು ವ್ಯವಸ್ಥಾಪಕ ಮೋಹನ್ ಹಾಗೂ ಮಾರ್ಕೆಟಿಂಗ್ ಮತ್ತು ಧನ ಸಂಗ್ರಹಣ ವ್ಯವಸ್ಥಾಪಕ ಆಶ್ರಿತ್ ಸಿ.ಪಿ. ಉಪಸ್ಥಿತರಿದ್ದರು.

# ಉಜಿರೆಯ ಕಿರಣ್ ಆಗ್ರೋಟೆಕ್‌ನಿಂದ ಸೇವಾಭಾರತಿಗೆ ಸೂಪರ್ ಗೋಲ್ಡ್ ಸ್ಪ್ರೇಯರ್(ಫಾಗ್) ಯಂತ್ರದ ಕೊಡುಗೆ





ಕಿರಣ್ ಅಗ್ರೋಟೆಕ್‌ನ ಮಾಲಿಕರಾದ ಶ್ರೀ ಪ್ರಕಾಶ್ ಬಿ.ಕೆ ಇವರು ಜುಲೈ 20 ರಂದು ಸೇವಾಭಾರತಿ ಕನ್ಯಾಡಿಯ ಕಚೇರಿಗೆ ಭೇಟಿ ನೀಡಿ, ಸೊಳ್ಳೆಯನ್ನು ಮುಕ್ತಮಾಡುವ ಸೂಪರ್ ಗೋಲ್ಡ್ ಸ್ಪ್ರೇಯರ್(ಫಾಗ್) ಯಂತ್ರವನ್ನು ಸೇವಾಧಾಮಕ್ಕೆ ಕೊಡುಗೆಯಾಗಿ ನೀಡಿದರು.

ಇವರು ಸೇವಾಭಾರತಿ/ ಸೇವಾಧಾಮದ ಕಾರ್ಯ ಚಟುವಟಿಕೆಗಳನ್ನು ಶ್ಲಾಘಿಸಿ, ಈ ಹಿಂದಿನಂತೆ ಮುಂದೆಯೂ ಸೇವಾಕಾರ್ಯಗಳಿಗೆ ಕೈ ಜೋಡಿಸುತ್ತೇನೆ ಎಂದು ಹೇಳಿ ಯಂತ್ರವನ್ನು ಸೇವಾಭಾರತಿಯ ಸಲಹಾ ಸಮಿತಿ ಸದಸ್ಯರಾದ ಶ್ರೀ ರಜತ್ ರಾವ್ ಇವರಿಗೆ ಹಸ್ತಾಂತರಿಸಿದರು.

ಶ್ರೀ ರಜತ್ ರಾವ್ ಇದನ್ನು ಸ್ವೀಕರಿಸಿ ಫಲಾನುಭವಿಗಳು ಮತ್ತು ಸಂಸ್ಥೆಯ ಪರವಾಗಿ ಧನ್ಯವಾದವಿತ್ತರು ಹಾಗೂ ಈ ಸಂದರ್ಭದಲ್ಲಿ ಸೇವಾಭಾರತಿಯ ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.

ಉಜಿರೆಯಲ್ಲಿ ಮುಖ್ಯ ಸೇವಾಕೇಂದ್ರವಿದ್ದು ಈ ವರ್ಷದಿಂದ ಕೊಕ್ಕಡದಲ್ಲೂ ಸೇವಾವಿಭಾಗ ಹೊಂದುವ ಮೂಲಕ ಕಿರಣ್ ಆಗ್ರೋ ಟೆಕ್ ಕೃಷಿಕರ ಅಶೋತ್ತರಗಳಿಗೆ ಶ್ರಮಿಸುವಲ್ಲಿ ಸಾಫಲ್ಯ ಕಂಡಿದೆ.

*I dont need easy, I just need possible*

## APD ಸಂಸ್ಥೆಯಿಂದ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಬಗ್ಗೆ ಮಾಹಿತಿ ಕಾರ್ಯಗಾರ



APD ಬೆಂಗಳೂರಿನಲ್ಲಿ, ಜುಲೈ 21, 22 ಮತ್ತು 23 ರಂದು ನಡೆಸಿದಂತಹ 3 ದಿನದ ಕಾರ್ಯಾಗಾರದಲ್ಲಿ ಸೇವಾಭಾರತಿ ಸಂಸ್ಥೆಯ ಸಿಬ್ಬಂದಿಗಳಾದ ಚರಣ್ ಕುಮಾರ್, ಶಶಾಂತ್, ನಾಗಾರ್ಜುನ್, ಕುಸುಮಾಧರ್ ಭಾಗವಹಿಸಿದ್ದರು. ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಸಮುದಾಯ ಆಧಾರಿತ ಸೇವೆಯನ್ನು ಉನ್ನತ ರೀತಿಯಲ್ಲಿ ನೀಡುವ ಸಲುವಾಗಿ ತರಬೇತಿಯನ್ನು ಆಯೋಜಿಸಲಾಗಿತ್ತು.

## ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ಫಲಾನುಭವಿಗಳಿಗೆ ವೈದ್ಯರಿಂದ ಸಮಾಲೋಚನೆ



ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ಪ್ರತಿ ತಿಂಗಳು ಫಲಾನುಭವಿಗಳಿಗೆ ನಡೆಸುವಂತಹ ವೈದ್ಯರ ಸಮಾಲೋಚನೆಯಲ್ಲಿ ಜುಲೈ ತಿಂಗಳಿನಂದು KMC ಮಂಗಳೂರು ಆಸ್ಪತ್ರೆಯ ಡಾಕ್ಟರ್ ವೈಶಾಕ್ ಭಟ್ ಸೇವಾಧಾಮಕ್ಕೆ ಭೇಟಿ ನೀಡಿದ್ದರು. ಫಲಾನುಭವಿಗಳನ್ನು ಪರೀಕ್ಷೆ ಮಾಡಿ ಅವರ ಆರೋಗ್ಯದ ಬಗ್ಗೆ ಮಾಹಿತಿಯನ್ನು ನೀಡಿದರು. ಈ ಸಮಾಲೋಚನೆಯಲ್ಲಿ 7 ಮಂದಿ ಫಲಾನುಭವಿಗಳು ಭಾಗವಹಿಸಿದ್ದರು.

## ಜುಲೈ ತಿಂಗಳಲ್ಲಿ ಉಚಿತ ಮತ್ತು ರಿಯಾಯಿತಿ ದರದಲ್ಲಿ ಗಾಲಿಕುರ್ಚಿ ವಿತರಣೆ



ಶ್ರೀಮತಿ ಸರೋಜಾ, ಹಾಸನ



ಶ್ರೀ ದೇವ್ ಸಿ.ಮುಗೇರ, ಸಕಲೇಶಪುರ

## ಜುಲೈ ತಿಂಗಳಲ್ಲಿ ಉಚಿತ ಮತ್ತು ರಿಯಾಯಿತಿ ದರದಲ್ಲಿ ನೀರಿನ ಹಾಸಿಗೆ ವಿತರಣೆ



ಶ್ರೀ ಗೋಪಾಲ್, ಕೋಲೂರು

## ಸೇವಾಧಾಮದಲ್ಲಿ ಪುನಶ್ಚೇತನಗೊಂಡ ಸನಿವಾಸಿಗಳ ಅನಿಸಿಕೆ

ನನ್ನ ಹೆಸರು ಮಹೇಶ ತೀರ್ಥಹಳ್ಳಿ (ತಾಲೂಕಿನ ಅರಳನುರಳಿ ಗ್ರಾಮದ) ಕೋದೂರು ವೆಂಕಬೈಲು ವಾಸ. ಜನವರಿ 9, 2024ಕ್ಕೆ ಬಿದ್ದು ಬೆನ್ನುಹುರಿ ಅಪಘಾತಕ್ಕೊಳಗಾಗಿದ್ದೇನೆ. ಬೆಂಗಳೂರು ಅಪೋಲೋ ಆಸ್ಪತ್ರೆಯಲ್ಲಿ ಸರ್ಜರಿ ಆಯಿತು. ನಂತರ ಎರಡು ಮೂರು ತಿಂಗಳಿಗೆ ಸೇವಾಧಾಮ ಸೌತಡ್ಕಕ್ಕೆ ಫಿಸಿಯೋಥೆರಪಿಗೆ ಬಂದಿದ್ದೇವೆ. ಇಲ್ಲಿಗೆ ಬರುವಾಗ ಆಂಬುಲೆನ್ಸ್‌ನಿಂದ ಬಂದೆ. ಈಗ ಇಲ್ಲಿಗೆ ಬಂದು ಮೂರು ತಿಂಗಳು ಆರು ದಿನ ಆಯಿತು ನನ್ನಲ್ಲಿ ತುಂಬಾ ಬದಲಾವಣೆಯಾಗಿದೆ. ನನಗೆ ಕುಳಿತುಕೊಳ್ಳಲು ಆಗುತ್ತಿರಲಿಲ್ಲ ಈಗ ಕುಳಿತುಕೊಳ್ಳುತ್ತೇನೆ. ನಾನೇ ಬಾತ್ ರೂಮ್‌ಗೆ ಹೋಗುತ್ತೇನೆ, ನನ್ನ ಎಲ್ಲಾ ಕೆಲಸ ಮಾಡಿಕೊಳ್ಳುತ್ತೇನೆ. ನನ್ನ ಈ ಎಲ್ಲಾ ಕೆಲಸಕ್ಕೆ ಮತ್ತು ನನ್ನ ಆರೋಗ್ಯ ಸುಧಾರಿಸಲು ಈ ಸೇವಾಧಾಮವೆ ಕಾರಣ. ಇಲ್ಲಿಯ ನೆನಪು ಎಂದೆಂದಿಗೂ ಮರೆಯಲು ಸಾಧ್ಯವಿಲ್ಲ. ನಾನು ಇವತ್ತು ಹೀಗೆ ಇದ್ದೇನೆ ಅಂದ್ರೆ ಈ ಸೇವಾಧಾಮದ ಸೇವೆ ಮತ್ತು ಡಾ. ಗಣೇಶ್ ಕಾರ್ತಿಕ್ ಮತ್ತು ಡಾ. ಸುರಕ್ಷಾ ಇವರ ಥೆರಪಿ ನಮಗೆ ಫಲ ಕೊಡುತ್ತ, ಮುಖ್ಯವಾಗಿ ಈ ಸಂಸ್ಥೆ ನಡೆಸುತ್ತಿರುವ ಕೆ. ವಿನಾಯಕ ಸರ್‌ರವರಿಗೆ ನನ್ನ ತುಂಬುಹೃದಯದ ನಮಸ್ಕಾರಗಳು. ಮತ್ತು ಇಲ್ಲಿ ಸೇವೆ ಮಾಡುತ್ತಿರುವ ಎಲ್ಲಾ ಸಿಬ್ಬಂದಿಗಳಿಗೂ ನನ್ನ ನಮಸ್ಕಾರಗಳು ಸದಾ ಹೀಗೆ ಮುನ್ನಡೆಯಲಿ ಎಂದು ಆಶಿಸುತ್ತೇನೆ ಮತ್ತು ಆ ದೇವರಲ್ಲಿ ಪ್ರಾರ್ಥಿಸುತ್ತೇನೆ.

ಇತಿ ನಿಮ್ಮವರು
**ಮಹೇಶ ತೀರ್ಥಹಳ್ಳಿ**

*Life would be tragic if it weren't funny*

## ಸುದ್ದಿ ಚಾನೆಲ್ ಮುಖ್ಯಸ್ಥ ದಾಮೋದರ್ ದೊಂಡೋಲೆ ಇವರಿಂದ ಸಂವಾದಾತ್ಮಕ ಕಾರ್ಯಾಗಾರ






ಸೇವಾಧಾಮ ಪುನಶ್ಚೇತನ ಕೇಂದ್ರ ಸೌತಡ್ಕದಲ್ಲಿ ನಡೆದ 'ಸಿಬ್ಬಂದಿಗಳ ಸಾಮರ್ಥ್ಯ ನಿರ್ಮಾಣ ಕಾರ್ಯಕ್ರಮ'ದ ಅಡಿಯಲ್ಲಿ "ಸಾಮಾಜಿಕ ಮಾಧ್ಯಮ ಮತ್ತು ಡಿಜಿಟಲ್ ರೂಪಾಂತರ" (Social Media & Digital Transformation) ಕುರಿತು ಸಂವಾದಾತ್ಮಕ ಕಾರ್ಯಾಗಾರದ ನಡೆಸಲಾಯಿತು. ಸಂಪನ್ಮೂಲ ವ್ಯಕ್ತಿಯಾಗಿ ದಾಮೋದರ್ ದೊಂಡೋಲೆ ಕೇಂದ್ರದ ಸನಿವಾಸಿಗಳಿಗೆ ಹಾಗೂ ಆರೈಕೆದಾರರಿಗೆ, ಸಿಬ್ಬಂದಿವರ್ಗದವರಿಗೆ ಮಾಹಿತಿ ಇತ್ತರು. ಸಾಮಾಜಿಕ ಜಾಲತಾಣಗಳು ಧನಾತ್ಮಕತೆ ಮತ್ತು ಋಣಾತ್ಮಕತೆಯನ್ನು ಹರಡುತ್ತದೆ ಇವುಗಳಲ್ಲಿ ಯಾವುದನ್ನು ಪಡೆದುಕೊಳ್ಳಬೇಕು ಎಂಬುದರ ಕುರಿತು ಎಚ್ಚರಿಕೆ ವಹಿಸಬೇಕು. ಅತಿಯಾದರೆ ಅಮೃತವೂ ವಿಷವಾದಂತೆ. ಸೋಶಿಯಲ್ ಮೀಡಿಯಾದ ಬಳಕೆಯು ಅತಿಯಾದರೆ ಮುಂದೊಂದಿನ ನಮಗೆನೆ ಅಪಾಯವನ್ನು ತಂದೊಡ್ಡಬಹುದು. ಹಾಗಾಗಿ ಅದರ ಬಳಕೆ ಮಿತವಾಗಿದ್ದರೆ ಎಲ್ಲವೂ ಹಿತವಾಗಿರುತ್ತದೆ ಎಂಬ ನುಡಿಗಳನ್ನಾಡಿದರು. ಸಂಸ್ಥೆಯ ಪರವಾಗಿ ಅವರನ್ನು ಗೌರವಿಸಿ, ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಸೇವಾಭಾರತಿಯ ಕಾರ್ಯದರ್ಶಿಯಾಗಿರುವ ಶ್ರೀ ಬಾಲಕೃಷ್ಣ, ಕೇಂದ್ರದ ಸನಿವಾಸಿಗಳು ಹಾಗೂ ಆರೈಕೆದಾರರು, ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು. ಡಾಕ್ಯುಮೆಂಟೇಶನ್, ಮಾನಿಟರಿಂಗ್ ಮತ್ತು ಇವಲ್ಯೂಟಿಂಗ್ ಸಂಯೋಜಕರಾದ ಸುಮನ ಸ್ವಾಗತಿಸಿ, ಅನುಸರಣೆ ಮತ್ತು ಹಣಕಾಸು ವ್ಯವಸ್ಥಾಪಕ ಮೋಹನ್ ಎಸ್. ಧನ್ಯವಾದವಿತ್ತರು.

## ಸೇವಾ ಸಂಗಮ

## ಆನ್‌ಲೈನ್ ಕಾರ್ಯಾಗಾರ







ಜುಲೈ ತಿಂಗಳ ಸೇವಾಸಂಗಮ ಆನ್‌ಲೈನ್ ಮಾಹಿತಿ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಸೆಲ್ಕೋ ಫೌಂಡೇಶನ್ ಪ್ರಾಜೆಕ್ಟ್ ಮ್ಯಾನೇಜರ್ ಆದ ಶ್ರೀ ಮಧು ಬಾಬು ಚಿಂತಲ ಇವರು ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗಾಗಿ ವಿಕೇಂದ್ರೀಕೃತ ನವೀಕರಿಸಬಹುದಾದ ಇಂಧನ ಪರಿಹಾರಗಳ ಮೂಲಕ ಜೀವನೋಪಾಯ ಅವಕಾಶಗಳನ್ನು ನಿರ್ಮಿಸುವುದರ ಬಗ್ಗೆ ಮಾಹಿತಿ ಇತ್ತರು. ಕಾರ್ಯಗಾರದಲ್ಲಿ ಒಟ್ಟು 70 ಮಂದಿ ಭಾಗವಹಿಸಿದ್ದರು.

# ತಮ್ಮ ವಿಶೇಷ ದಿನವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಿ ಮಾದರಿಯಾದವರು



ಸೇವಾಧಾಮದಲ್ಲಿ ಪುನಶ್ಚೇತನ ಪಡೆಯುತ್ತಿರುವ ದಿವ್ಯಾಂಗರಿಗೆ ಒಂದು ಹೊತ್ತಿನ ಊಟಕ್ಕಾಗಿ ದೇಣಿಗೆಯನ್ನು ನೀಡುವ ಮೂಲಕ ತಮ್ಮ ವಿಶೇಷ ದಿನವನ್ನು ಆಚರಿಸಿ ಎಲ್ಲರಿಗೂ ಮಾದರಿಯಾಗಿದ್ದೀರಿ. ತಮ್ಮ ಈ ಸೇವಾಕಾರ್ಯಕ್ಕೆ ಕೃತಜ್ಞತೆಗಳು...





ಶ್ರೀ ಕೆ. ವಿನಾಯಕ ರಾವ್, ಕನ್ಯಾಡಿ



ಮಾ। ಆರ್ಯನ್ ಅಭಿಷೇಕ್, ಬೆಂಗಳೂರು



ಮಾ। ರಿಷಾಗ್ ಗುರುಪ್ರಸಾದ್, ಬೆಳ್ತಂಗಡಿ



ಶ್ರೀ ಕಾರ್ತಿಕ್ ಗೌಡ, ಪೆರ್ಲಂಪಾಡಿ



ಶ್ರೀಮತಿ ಶಾಂತ ಕುಮಾರಿ, ಉಜಿರೆ



ಶ್ರೀ ದಿನೇಶ್ ಕೆ. ಹೆಗ್ಡೆ ಮತ್ತು ಶ್ರೀಮತಿ ಆಶಾ ದಿನೇಶ್ ಹೆಗ್ಡೆ, ಶಿರಸಿ



ಕು. ಪ್ರೀತಿ ವಿ. ಜೆ, ಕಿಲ್ಲೂರು



ಶ್ರೀ ಹರಿಕಿರಣ್ ಯು.ಆರ್. ಮತ್ತು ಶ್ರೀಮತಿ ಅಪೂರ್ವ ಪಿ.ವಿ, ಪುತ್ತೂರು



ಶ್ರೀ ಕೃಷ್ಣ, ಶಿರಸಿ



ಶ್ರೀ ಹೆರ್ಗ ದಿನಕರ್ ಶೆಟ್ಟಿ, ಉಡುಪಿ



ಶ್ರೀ ಅಕ್ಷಯ್ ಪಾಟಾಲಿ, ಸುಳ್ಯ



ಶ್ರೀ ಕೆ. ವಿವೇಕ್ ರಾವ್, ಬೆಂಗಳೂರು



ಶ್ರೀಮತಿ ಮಮತಾ ಎನ್. ಹೊಳ್ಳ, ಉಜಿರೆ



ಶ್ರೀ ಉಮಕಾಂತ್ ಎನ್.ಡಿ, ಬೆಂಗಳೂರು



ಶ್ರೀ ನಿತಿನ್ ಗೌಡ, ಉಜಿರೆ



ಬೇಬಿ ರಿಧನ್ಯ ಗುರುಪ್ರಸಾದ್ ಟಿ., ಬೆಳ್ತಂಗಡಿ



ಕು. ರಚನಾ ಗುಡಿಗಾರ್, ಅಲೆಕ್ಕಿ

## ನಿಮಗಿದು ತಿಳಿದಿರಲಿ

- ವಾಹನಗಳನ್ನು ಎಚ್ಚರಿಕೆಯಿಂದ ಚಲಿಸುವುದರಿಂದ ಅಪಘಾತವನ್ನು ತಪ್ಪಿಸಬಹುದು
- ವಾಹನಗಳನ್ನು ಚಲಿಸುತ್ತಿರುವಾಗ ಹತ್ತುವುದಕ್ಕಾಗಲಿ ಮತ್ತು ಇಳಿಯುವುದಕ್ಕಾಗಲಿ ಪ್ರಯತ್ನಿಸಬಾರದು
- ಕುಡಿದ ಅಮಲಿನಲ್ಲಿ ವಾಹನಗಳನ್ನು ಚಲಿಸಬಾರದು
- ಎತ್ತರ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುವಾಗ ಮುನ್ನೆಚ್ಚರಿಕೆಯ ಕ್ರಮಗಳನ್ನು ಅನುಸರಿಸುವುದು
- ತೆಂಗಿನಮರಗಳನ್ನು ಹತ್ತುವಾಗ ಕೃತಕಯಂತ್ರ ಮತ್ತು ಸಾಧನಗಳನ್ನು ಬಳಸುವುದು
- ಕಟ್ಟಡದ ಕೆಲಸಗಳನ್ನು ನಿರ್ವಹಿಸುವಾಗ ರಕ್ಷಣಾಕವಚಗಳನ್ನು ಬಳಸುವುದು

## ಬೆನ್ನುಹುರಿ ಅಪಘಾತವನ್ನು ತಡೆಗಟ್ಟುವ ಕ್ರಮಗಳು

- ವಿದ್ಯುತ್ಶಕ್ತಿಯಲ್ಲಿ ಕೆಲಸ ಮಾಡುವವರು ಕೈ ಮತ್ತು ಕಾಲುಗಳಿಗೆ ವಿದ್ಯುತ್ ನಿರೋಧಕ ಕವಚಗಳನ್ನು ತಪ್ಪದೇ ಧರಿಸುವುದು ಮತ್ತು ಜಾಗರೂಕತೆಯಿಂದ ಕಾರ್ಯನಿರ್ವಹಿಸುವುದು
- ಇತರೆ ಕೆಲಸಗಳಾದ (ಮರಳು ತೆಗೆಯುವಾಗ, ಮರಗಳನ್ನು ಕತ್ತರಿಸುವಾಗ, ಮೂಟೆಗಳನ್ನು ಹೊರುವಾಗ) ಅಪಾಯದ ಅಂಚನ್ನು ಗಮನಿಸಿ ಜಾಗರೂಕತೆ ವಹಿಸುವುದು.
- ಬೆನ್ನುಹುರಿ ನೋವುಕಂಡುಬಂದಲ್ಲಿ ಕೂಡಲೆ ನುರಿತವೈದ್ಯರಿಂದ ಚಿಕಿತ್ಸೆಪಡೆಯಿರಿ
- ಬೆನ್ನುಹುರಿ ಅಪಘಾತದ ಬಗ್ಗೆ ಹೆಚ್ಚು- ಹೆಚ್ಚುಮಾಹಿತಿಯನ್ನು ತಿಳಿಯಿರಿ ಇತರರಿಗೂ ತಿಳಿಸಿ

## ನಮ್ಮ ಯೋಜನೆಗಳು

**ಆರೋಗ್ಯಮ್** : ರಕ್ತದಾನ ಶಿಬಿರಗಳ ಆಯೋಜನೆ ಮತ್ತು ಆ್ಯಂಬುಲೆನ್ಸ್ ಸೇವೆಗಳು.

**ಸಬಲಿನಿ** : ಮಹಿಳಾ ಸ್ವಾವಲಂಬನಕ್ಕಾಗಿ ವೃತ್ತಿ ತರಬೇತಿ.

**ಸೇವಾಧಾಮ** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಪುನಶ್ಚೇತನ ಕೇಂದ್ರ.

**ಸೇವಾಪಥ** : ಮಾಸಿಕ ಈ–ನ್ಯೂಸ್ ಲೆಟರ್ .

**ಸೇವಾ ಸಂಗಮ** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಆನ್‌ಲೈನ್ ಮೂಲಕ ಸಂಬಂಧಿತ ತಜ್ಞರಿಂದ ಮಾಹಿತಿ, ತರಬೇತಿ ಹಾಗೂ ಮಾರ್ಗದರ್ಶನ.

**ಆರೋಗ್ಯ ಬಿಂದು**: ಫಲಾನುಭವಿಗಳಿಗೆ ಕನಿಷ್ಠ ದರದಲ್ಲಿ ಸೆಲ್ಫ್‌ಕೇರ್ & ಮೆಡಿಕಲ್ ಕಿಟ್‌ಗಳು

### ತಾವು ಹೀಗೂ ನಮ್ಮ ಸಂಸ್ಥೆಯೊಂದಿಗೆ ಕೈಜೋಡಿಸಬಹುದಾಗಿದೆ

### ಸಂಸ್ಥೆಗೆ ದೇಣಿಗೆ ಮೂಲಕ ಸಹಕಾರ

| | |
|---|---|
| ರೂ. 2000/– | ನೀಡುವುದರ ಮೂಲಕ ಒಟ್ಟು ಫಲಾನುಭವಿಯ ಒಂದು ತಿಂಗಳ ಮೆಡಿಕಲ್ ಕಿಟ್‌ಗಳಿಗಾಗಿ ಸಹಕಾರ. |
| ರೂ. 6000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಗಾಗಿ ಸಹಕಾರ |
| ರೂ. 4500/– | ನೀಡುವುದರ ಮೂಲಕ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಯ ಸಂದರ್ಭ ಪೋಷಕರಿಗಾಗಿ ಸಹಕಾರ |
| ರೂ. 3000/– | ನೀಡುವುದರ ಮೂಲಕ ಸೇವಾಧಾಮದಲ್ಲಿ ಒಂದು ಹೊತ್ತಿನ ಊಟೋಪಚಾರಕ್ಕೆ ಸಹಕಾರ |
| ರೂ. 10000/– | ನೀಡುವುದರ ಮೂಲಕ ಸಮುದಾಯ ಭೇಟಿಗಾಗಿ ಸಹಕಾರ |
| ರೂ. 15000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಗಳಿಗೆ ಒಂದು ಗಾಲಿಕುರ್ಚಿಯ ಕೊಡುಗೆ |
| ರೂ. 10000/– | ನೀಡುವುದರ ಮೂಲಕ ಕೇಂದ್ರದಲ್ಲಿ ಹುಟ್ಟು ಹಬ್ಬದ ಆಚರಣೆ ಮಾಡುವುದು |

### Account Details

| | |
|---|---|
| A/c Holder | - M/s. Sevabharathi(R) |
| A/c No | - 120000400920 |
| IFS Code | - CNRB0010246 |
| Bank | - Canara Bank, Dharmasthala Branch |
| A/c Type | - Current Account |

| | |
|---|---|
| A/c Holder | - M/s. Sevabharathi(R) |
| A/c No | - 01682200072637 |
| IFS Code | - CNRB0010168 |
| Bank | - Canara Bank, Kokkada Branch |

**DONATE & JOIN US IN OUR MISSION**

*We are put in situations to build our character... not destroy us*

# ಬೆನ್ನುಹುರಿ ಅಪಘಾತಗೊಂಡರೂ ಉಲ್ಲನ್ ಹೆಣಿಕೆಯ ಮೂಲಕ ಬದುಕು ಕಟ್ಟಿಕೊಂಡ ಪೂರ್ಣಿಮಾ ಭಟ್ ಕುಂತೂರು



> **“ ಬೆನ್ನುಹುರಿ ಅಪಘಾತಗಳಿಂದ ಸಮಸ್ಯೆಗಳು ಭೌತಿಕ, ಮಾನಸಿಕ, ಸಾಮಾಜಿಕ, ಆರ್ಥಿಕ ತೊಂದರೆ ಹಾಗೂ ದೈಹಿಕ ನ್ಯೂನ್ಯತೆಗಳು ಉಂಟಾಗಿ ಎಷ್ಟೋ ಸಾರಿ ಪ್ರಾಣಪಾಯಕ್ಕೆ ಕಾರಣವಾದದ್ದು ಸಹ ಇದೆ ಮತ್ತು ಜೀವನದಲ್ಲಿ ಬಂದಂತಹ ಎಲ್ಲಾ ಕಷ್ಟಗಳನ್ನು ಎದುರಿಸಿ ಬದುಕಿನಲ್ಲಿ ಅದನ್ನು ಮೆಟ್ಟಿನಿಂತವರು ಸಹ ಇದ್ದಾರೆ. ಅಂತವರಲ್ಲಿ ಬೆನ್ನುಹುರಿ ಅಪಘಾತಗೊಂಡು ತನ್ನ ಬದುಕಿನಲ್ಲಿ ಕಷ್ಟ ನೋವುಗಳ ಜೊತೆ ಮಿಂದೆದ್ದು, ಉಲ್ಲನ್ ಹೆಣಿಕೆಗಳಿಂದ ಸುಂದರವಾದ ಗೊಂಬೆಗಳನ್ನು ತಯಾರಿಸುತ್ತ ಅಮೂಲ್ಯವಾದ ಬದುಕು ಕಟ್ಟಿಕೊಂಡ ಬೆನ್ನುಹುರಿ ಅಪಘಾತಕ್ಕೊಳಗಾದ ಪೂರ್ಣಿಮಾ ಭಟ್‌ರವರ ಯಶೋಗಾಥೆ ನಿಮ್ಮ ಮುಂದೆ.**

ಇವರು ಕಡಬ ತಾಲೂಕಿನ ಕುಂತೂರು ನಿವಾಸಿಯಾಗಿದ್ದು. ಫೆಬ್ರವರಿ 1, 1991ರಲ್ಲಿ ಜನಿಸಿದರು. ತಂದೆ ಟಿ.ಜಿ.ವೆಂಕಟ್ರಮಣ ಭಟ್, ತಾಯಿ ಜಯಂತಿ. ತನ್ನ ಪ್ರಾಥಮಿಕ ಶಿಕ್ಷಣವನ್ನು ವಿಟ್ಲದ ಮೈತ್ರೇಯಿ ಗುರುಕುಲದಲ್ಲಿ ಪಂಚಮುಖಿ ಶಿಕ್ಷಣವನ್ನು ಪಡೆದುಕೊಂಡು ನಂತರ ಪದವಿಪೂರ್ವ ಮತ್ತು ಪದವಿ ಶಿಕ್ಷಣವನ್ನು ಪುತ್ತೂರಿನ ವಿವೇಕಾನಂದದಲ್ಲಿ ಮುಗಿಸಿದರು. ತನ್ನ ಚಿಕ್ಕ ಕುಟುಂಬದಲ್ಲಿ ಸುಂದರ ಜೀವನವನ್ನು ಸಾಗಿಸುತ್ತಿದ್ದ ಪೂರ್ಣಿಮಾ ಭಟ್ ಅಕ್ಟೋಬರ್ 20, 2016 ರಂದು ಕಡಬದಿಂದ ಬೆಂಗಳೂರಿನ ಕಡೆಗೆ ಹೋಗುವ ಸಂದರ್ಭದಲ್ಲಿ ನೆಲಮಂಗಲದ ಹತ್ತಿರ ಕಾರು ಮತ್ತು ಲಾರಿಯ ನಡುವೆ ನಡೆದ ರಸ್ತೆ ಅಪಘಾತದಲ್ಲಿ ತಕ್ಷಣ ಇವರನ್ನು ಬೆಂಗಳೂರಿನ ಅಪೋಲೋ ಆಸ್ಪತ್ರೆಗೆ ದಾಖಲಿಸಿದರು. ಬೆನ್ನುಮೂಳೆಗೆ ವಿಪರೀತ ಗಾಯಗೊಂಡ ಪರಿಣಾಮದಿಂದ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ಮಾಡಲಾಯಿತು. ತದನಂತರ ವೈದ್ಯರು, ನೀವುಫಿಸಿಯೋಥೆರಪಿ ಪಡೆದುಕೊಳ್ಳಬೇಕು ನಂತರ ನಿಧಾನವಾಗಿ ಗುಣಮುಖರಾಗುತ್ತಿರ ಎಂಬ ಭರವಸೆಯನ್ನು ನೀಡಿದರು. ಶಸ್ತ್ರಚಿಕಿತ್ಸೆ ಆದ ನಂತರ 1 ವರ್ಷಗಳ ಕಾಲ ಹಾಸಿಗೆಯಲ್ಲಿ ಮಲಗಿ ತನ್ನ ದಿನನಿತ್ಯದ ಕಾಲಕಳೆಯುತ್ತಿದ್ದ ಪೂರ್ಣಿಮಾ ಭಟ್ ಬಳಿಕ ಡಾ। ಈಶ್ವರ ಕೀರ್ತಿ ಇವರ ಮುಖಾಂತರ ಮಂಗಳೂರಿನ ಮಣಿಪಾಲದ ಕೆಎಂಸಿ ಆಸ್ಪತ್ರೆಯಲ್ಲಿ 2 ತಿಂಗಳವರೆಗೆ ಫಿಸಿಯೋಥೆರಪಿಯನ್ನು ಪಡೆದುಕೊಂಡರು.

ತನ್ನ ಚಿಕ್ಕವಯಸ್ಸಿನಲ್ಲೇ ಜೀವನ ಹೀಗಾಯಿತಲ್ಲ ಎಂಬ ಚಿಂತೆಯಲ್ಲಿ ಬದುಕಿನ ಭರವಸೆಯನ್ನೇ ಕಳೆದುಕೊಂಡು ಜೀವನ ಕಳೆಯುತ್ತಿದ್ದಾಗ ಬೆನ್ನೆಲುಬಾಗಿ ನಿಂತು ಸಹಕಾರ ತೋರಿದವರು ಪೂರ್ಣಿಮಾ ಅವರ ತಾಯಿ ಮನೆಯವರು. ಇಂತಹ ಸಂದರ್ಭದಲ್ಲಿ ಯಾವುದೇ ಧೈರ್ಯಗೆಡದೆ ಜೀವನದ ಬಗ್ಗೆ ಭರವಸೆ ಕಳೆದುಕೊಳ್ಳದಂತೆ ಇರಲು ನನ್ನ ತಂದೆ, ತಾಯಿ ಬೆನ್ನೆಲುಬಾಗಿ ನಿಂತರು. ಫಿಸಿಯೋಥೆರಪಿ ಪಡೆದುಕೊಂಡ ನಂತರ 2020 ರಲ್ಲಿ ತನ್ನ ಕಾಲಮೇಲೆ ತಾನು ನಿಂತುಕೊಳ್ಳಬೇಕು ನಾನು ಏನನ್ನಾದರೂ ಸಾಧಿಸಬೇಕು ಎಂಬ ಹಠತೊಟ್ಟರು. ಈ ಸಂದರ್ಭದಲ್ಲಿ ಪೂರ್ಣಿಮಾ ಅವರಿಗೆ ಬೆನ್ನೆಲುಬಾಗಿ ನಿಂತದ್ದು ತನ್ನ ಗೆಳತಿ ವಿಜಯ. ಇವರ ಸಹಾಯವನ್ನು ಪಡೆದುಕೊಂಡು Crochet On Wheel ಎಂಬ ಚಿಕ್ಕ ಬ್ಯುಸಿನೆಸ್ ಮಾಡಲು ಪ್ರಾರಂಭಿಸಿದರು.

ಚಿಕ್ಕಮಕ್ಕಳಿಗೆ ಕೈಯಿಂದ ಮಾಡಿದ ಉಲ್ಲನ್ನ ಬಟ್ಟೆಗಳನ್ನು ತಯಾರಿಸುತ್ತಿದ್ದರು. ಬಟ್ಟೆಗಳನ್ನು ತಯಾರಿಸುವ ಜೊತೆಗೆ ಬೇರೆ – ಬೇರೆ ರೀತಿಯ ಟಾಯ್ಸ್, ಗೊಂಬೆ, ಜ್ಯುವೆಲ್ಲರಿ ಐಟಮ್ಸ್ , ಟಿಶರ್ಟ್, ಸ್ವೇಟರ್‌ಗಳನ್ನು ಮಾಡಲು ಪ್ರಾರಂಭಿಸಿದರು. ತನ್ನ ಜೀವನದಲ್ಲಿ ನಾನು ಏನಾದರೂ ಸಾಧಿಸಬೇಕು ಯಾವುದು ನನ್ನಿಂದ ಅಸಾಧ್ಯವೆಂದು ಆಗಬಾರದು ಎಂಬ ನಿಟ್ಟಿನಲ್ಲಿ ಚಿಕ್ಕ ವ್ಯಾಪಾರವನ್ನು ಮಾಡುತ್ತಾ ಬಂದ ಪೂರ್ಣಿಮಾ ಭಟ್‌ರವರ ವ್ಯಾಪಾರ ಪ್ರಾರಂಭವಾಗಿ ಮೂರು ವರ್ಷ ಆಗ್ತಾ ಬಂತು. ತನ್ನದೇ ಆದ ಇನ್‌ಸ್ಟಾಗ್ರಾಮ್ ಮತ್ತು ಫೇಸ್‌ಬುಕ್‌ನಲ್ಲಿ @Crochet On Wheels ಖಾತೆಯನ್ನು ತೆರೆದು, ಬೆನ್ನುಹುರಿ ಅಪಘಾತಗೊಂಡವರು ಸಹ ಏನನ್ನು ಸಾಧಿಸಬಲ್ಲರು ಎಂದು ಈ ವ್ಯಾಪಾರದ ಮೂಲಕ ಜನರಿಗೆ ತನ್ನನ್ನು ತಾನು ಪರಿಚಯಿಸಿಕೊಳ್ಳುತ್ತ ಜೀವನದ ವಿಜಯಪಥದ ಕಡೆಗೆ ಮುನ್ನಡೆಯುತ್ತಿದ್ದಾರೆ.